

ನ್ಯಾಷನಲ್ ಥಿಯೇಟರ್‌ನ ಹೊರನೋಟ



ದಿ ಮೋನೋಲಿತ್ ಪ್ರವಾಸಿ ಸ್ಥಳದ ಸುಂದರನೋಟ



ಓಸ್ಲೋ ಮುನಿಸಿಪಾಲಿಟಿ ಕೌನ್ಸಿಲರುಗಳು ಸಭೆ ಸೇರುವ ಹಾಲ್

ಮಜಲುಗಳು ಮನುಷ್ಯರನ್ನು ಹದಗೊಳಿಸುವುದನ್ನು ಶಿಲೆಯಲ್ಲಿ ಪಡಿಮೂಡಿಸುವ ಕುಸುರಿತನದ ಕೌಶಲ ಅಲ್ಲಿನ ಒಂದೊಂದೂ ಶಿಲ್ಪಗಳಲ್ಲಿದೆ. ಪ್ರೇಮೋನ್ಮತ್ತ ಗಂಡುಹೆಣ್ಣಿನ ಕಾಮ ಪ್ರಧಾನವಾದ ಅನ್ಯೋನ್ಯತೆ, ಮಧ್ಯ ವಯಸ್ಸಿನ ಹೊಣೆಗಾರಿಕೆ, ಪ್ರಾಯಪ್ರಬುದ್ಧತೆಯಿಂದ ಮೈಗೂಡಿದ ವಿಮನಸ್ಕತೆ ಇವೆಲ್ಲ ಬದುಕಿನ ವಿವಿಧ ಹಂತಗಳನ್ನು ಅನಾವರಣಗೊಳಿಸುತ್ತವೆ. ಕೊಟ್ಟಕೊನೆಯಲ್ಲಿರುವ ಏಕಶಿಲಾಸ್ತಂಭ – 'ದಿ ಮೋನೋಲಿತ್' ವ್ಯಕ್ತಪಡಿಸುವ, ಈ ನಶ್ವರ ಭೌತಿಕ ಜೀವನದಲ್ಲಿ 'ಕಾಲು ನೆಲದಲ್ಲಿ, ನೋಟ ನಭದಲ್ಲಿ' ಎಂಬಂತೆ ಐಹಿಕತೆಯಾಚೆಗಿನ ಪಾರಮಾರ್ಥಿಕತೆಯ ಹಂಬಲದ ಶಿಲ್ಪ ಬದುಕಿನ ಸಂಪೂರ್ಣ ದರ್ಶನ ಮಾಡಿಸುತ್ತಿದೆಯೆಂಬ ಭಾವ ಮೂಡಿಸುತ್ತದೆ. ತನ್ನ ಶಿಲ್ಪಕಲೆ ಲಿಂಗ–ದೇಶ–ಕಾಲಾತೀತವಾಗಿ ಮಾನವ ಬದುಕಿನ ಪರಮದರ್ಶನ ಮಾಡಿಸಬೇಕೆಂಬ ವಿಗೆಲೆಂಡನ ಹಂಬಲ ಖಂಡಿತಕ್ಕೂ ಇಲ್ಲಿ ಸಂಪೂರ್ಣವಾಗಿ ಈಡೇರಿದೆ. ಹೈಸ್ಕೂಲ್ ಅಧ್ಯಾಪಕಿಯೂ ಆಗಿದ್ದ ಪ್ರಬುದ್ಧ ವಯಸ್ಸು ಮತ್ತು ಮನೋಭಾವದ ನಮ್ಮ ಗೈಡ್ ಶಿಲ್ಪಗಳ ಕುರಿತು ಚೆನ್ನಾಗಿ ವಿವರಿಸಿದಳು.

ಫ್ರಾಗ್ನರ್ ಪಾರ್ಕ್ ಕೇವಲ ಶಿಲ್ಪೋದ್ಯಾನ ಮಾತ್ರವೇ ಅಲ್ಲ; ಇದು ನೂರಾರು ವೈವಿಧ್ಯಮಯ ತಳಿಗಳ ಗುಲಾಬಿ ಗಿಡಗಳಿರುವ ಸಸ್ಯೋದ್ಯಾನವೂ ಹೌದು. ಹುಲ್ಲುಹಾಸುಗಳು, ಕಾರಂಜಿಗಳು, ಸೇತುವೆಗಳು ಎಂದು ಪ್ರವಾಸಿಗರನ್ನು ಉಲ್ಲಸಿತರನ್ನಾಗಿರಿಸುತ್ತದೆ.

## ನೊಬೆಲ್ ಪ್ರಶಸ್ತಿ ತಾಣ; ಸಿಟಿ ಹಾಲ್

ಓಸ್ಲೋ ನಗರ ಮುನ್ಸಿಪಾಲಿಟಿಯ ನಗರ ಮಧ್ಯದಲ್ಲಿರುವ ಕೆಂಪು ಇಟ್ಟಿಗೆಗಳ ಕಟ್ಟಡ 'ಸಿಟಿ ಹಾಲ್' ಹಲವು ವಿಧಗಳ ಪ್ರಾಮುಖ್ಯತೆಯ ಕಟ್ಟಡಗಳಲ್ಲೊಂದು. ನೊಬೆಲ್ ಪ್ರಶಸ್ತಿದಾತ ಆಲ್ಫ್ರೆಡ್ ನೊಬೆಲ್ ಮರಣಿಸಿದ ಡಿಸೆಂಬರ್ 10ತರಂದು ಅಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕಾರ ನೆರವೇರುತ್ತದೆ. ಪ್ರಶಸ್ತಿ ಪುರಸ್ಕೃತರು ಕಡ್ಡಾಯವಾಗಿ ಮಾತನಾಡಲೇಬೇಕು. ಅದಕ್ಕಾಗಿಯೇ ವೇದಿಕೆಯಲ್ಲಿ ಪ್ರತ್ಯೇಕ ನುಡಿಪೀಠವಿದೆ. ನೊಬೆಲ್ ಮಂಡಳಿ, ರಾಜಕುಟುಂಬ ಮತ್ತು ಪ್ರಧಾನಮಂತ್ರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ. ನಮ್ಮ ದೇಶದ ಕೈಲಾಶ್ ಸತ್ಯಾರ್ಥಿ ಮತ್ತು ಪಾಕಿಸ್ತಾನದ ಮಲಾಲಾ ನೆನಪಾದರು.

ದೇಶದ ಇತಿಹಾಸಕ್ಕೆ ಸಂಬಂಧಿಸಿದ ವರ್ಣಚಿತ್ರಗಳು ಗೋಡೆಗಳನ್ನಲಂಕರಿಸಿವೆ. ಸಿಟಿ ಹಾಲ್‌ನ ಮೇಲ್ಭಾಗದಲ್ಲಿ ನಗರ ಮುನಿಸಿಪಾಲಿಟಿಯ ಕೌನ್ಸಿಲರುಗಳು ಸಭೆ ಸೇರುವ ಓಕ್ ಮರದ ಹಲಗೆಯ ನೆಲದ ಹಾಲ್ ನೋಡಿದೆವು. ಇಲ್ಲಿನ ರಾಜ ಕುಟುಂಬದವರಿಗೆ ವಿವಿಧ ಸಂದರ್ಭಗಳಲ್ಲಿ ಕೊಡುಗೆಯಾಗಿ ಬಂದಿರುವ ಸ್ಮರಣಿಕೆಗಳಲ್ಲಿ ನಮ್ಮ ತಾಜ್‌ಮಹಲ್ ಅನ್ನು ಸಂತೋಷವಾಯಿತು. ಬೇರೆ ಬೇರೆ ದೇಶಗಳ ಮುಖಂಡರುಗಳೊಂದಿಗೆ ನಾರ್ವೆಯ ರಾಜಕುಟುಂಬದ ಸದಸ್ಯರು ಸಭೆ ಸೇರುವ ಸಭಾಂಗಣದಲ್ಲಿ ಈಗಿನ ರಾಜ, ಮೊಟ್ಟಮೊದಲ ಡೇನಿಷ್ ರಾಜ ಮುಂತಾದವರ ಬೃಹತ್ ಪಟಗಳಿವೆ.

ಸಿಟಿ ಹಾಲ್‌ನ ಉತ್ತರ ಭಾಗದ ಪ್ರಮುಖ ಪ್ರವೇಶ